# ಹಬ್ಬಗಳ ಸೊಬಗಿಗೆ ಸೀರೆಗಳ ಮೆರುಗು



**ಶ್ರಾವಣ ಸಂಭ್ರಮ ಕಳೆಕಟ್ಟುತ್ತಿದೆ. ಮಹಿಳೆಯರು ಸೀರೆ ಖರೀದಿಯ ಸಂಭ್ರಮದ ಜೊತೆಗೆ ಈಗಿನ ಟ್ರೆಂಡಿಂಗ್‌ನಲ್ಲಿರುವ ಸೀರೆಗಳ ಬಗ್ಗೆಯೂ ಒಲವು ತೋರಿಸಲಾರಂಭಿಸಿದ್ದಾರೆ.**

**ಯು. ವೇಣೂರು**

ಶ್ರಾವಣ ಬಂತು ಕಾಡಿಗೆ, ಬಂತು ನಾಡಿಗೆ... ಬೇಂದ್ರೆಯವರ ಈ ಕವನದ ಸಾಲು ಶ್ರಾವಣ ಮಾಸ ಸಂಭ್ರಮವನ್ನು ವರ್ಣಿಸುತ್ತದೆ. ಬೇಂದ್ರೆ ಅವರ ಪ್ರಕಾರ ಶ್ರಾವಣ ಮಾಸವು ಕೇವಲ ಋತುವಲ್ಲ, ಅದು ಒಂದು ಅನುಭವ, ಒಂದು ಭಾವನೆ. ಅದೊಂದು ಅನುಭೂತಿ. ಹೆಣ್ಮಕ್ಕಳಿಗಂತೂ ಶ್ರಾವಣ ಮಾಸವೇ ಒಂದು ಸಂಭ್ರಮ, ಅತೀತ ಸಡಗರ. ಅಂದ ಹಾಗೆ, ಹಬ್ಬಗಳ ಮೂಲಭೂತ ಉದ್ದೇಶವೇ ಸಡಗರವಲ್ಲವೇ? ಸಂತಸ ಸಂಭ್ರಮವನ್ನು ಹಂಚುವುದೇ ಹಬ್ಬದ ಉದ್ದೇಶವೂ ಹೌದು. ಆ ಮೂಲಕ ದೈನಂದಿನ ಜಂಜಡದಿಂದ ದೂರವಿರುವುದರ ಜೊತೆಗೆ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳುವುದು.

ಶ್ರಾವಣ ಮಹಿಳೆಯರ ಪಾಲಿಗೆ ಫ್ಯಾಷನ್ ಮೆರೆಯುವ ಕಾಲ. ಹಬ್ಬಕ್ಕೆ ಉಟ್ಟು ಮೆರೆಯಲು ಸೀರೆಗಳನ್ನು ಕಲೆಹಾಕುವ ಸಮಯ. ರೇಷ್ಮೆ ಸೀರೆ, ಕಾಟನ್ ಸಿಲ್ಕ್ ಸೀರೆ, ಭರ್ಜರಿ ಸೀರೆ, ಸಾದಾ ಸೀರೆ, ಖಾದಿ ಸೀರೆ... ಹೀಗೆ ಯಾವ ಹಬ್ಬಕ್ಕೆ ಯಾವ ಸೀರೆ ಉಡಬಹುದು ಎಂಬ ಲೆಕ್ಕಾಚಾರ ಶುರುವಿಟ್ಟುಕೊಳ್ಳುವ ಪರ್ವ ಕಾಲ. ಚೈತ್ರ ಮಾಸ ಕಳೆದು ಶ್ರಾವಣ ಮಾಸ ಬಂದಾಗ ಮಹಿಳೆಯರ ಮೈಮನಗಳಲ್ಲಿ ಪುಳಕದ ಸೆಳಕೊಂದು ಹಾದುಹೋಗುತ್ತದೆ. ಏಕೆಂದರೆ ಮಹಿಳೆಯರಿಗೆ ಸೀರೆಯೊಂದಿಗೆ ಇರುವ ಅವಿನಾಭಾವ ನಂಟು. ಸೀರೆ ಎಂದರೆ ಅದು ಬರೀ ಒಂದು ಉಡುಗೆಯಲ್ಲ. ಅದು ಭಾವ ಬಂಧನದ ಬೆಸುಗೆ. ಹೆಣ್ಣಿನ ವ್ಯಕ್ತಿತ್ವದ ಪ್ರತಿರೂಪದಂತೆ ಸೀರೆ ಕಂಗೊಳಿಸುತ್ತದೆ.

ಜೊತೆಗೆ ಸೀರೆಯೊಂದಿಗೆ ನೆನಪಿನ ಸರಮಾಲೆಯೂ ಸುಳಿದುಹೋಗುತ್ತದೆ. ಶ್ರಾವಣದಲ್ಲಿ ತವರಿನ ಬಾಂಧವ್ಯವೂ ಮಹಿಳೆಗೆ ಬಹಳ ಮುಖ್ಯವಾಗುತ್ತದೆ. ಏಕೆಂದರೆ ಶ್ರಾವಣದಲ್ಲಿ ಬರುವ ಪ್ರತಿ ಹಬ್ಬಕ್ಕೂ ಒಂದೊಂದು ನೆನಪಿನ ಕಾಣಿಕೆ ಇದ್ದೇ ಇರುತ್ತದೆ. ಮಂಗಳಗೌರಿ ಹಬ್ಬಕ್ಕೆ ಒಂದು ಸೀರೆ, ನಾಗರ ಪಂಚಮಿ ಬಂದರೆ ಅಣ್ಣ ಕೊಡಿಸುವ ಜರತಾರಿ ಸೀರೆ, ವರಮಹಾಲಕ್ಷ್ಮಿಗೆ ಪತಿಯ ಕಾಣಿಕೆಯ ಸೀರೆ, ಗೌರಿ ಹಬ್ಬಕ್ಕೆ ಅಮ್ಮನ ಉಡುಗೊರೆ ಮಡಿಲು ತುಂಬಿದರೆ ಮಹಿಳೆಯ ಮೊಗದಲ್ಲಿ ಸಂತೃಪ್ತಿಯ ಭಾವವೇ ಸುಳಿದು ಹೋಗುತ್ತದೆ.

ಫ್ಯಾಷನ್‌ಗೂ ಶ್ರಾವಣ ಮಾಸಕ್ಕೂ ಅನನ್ಯ ನಂಟು ಇದೆ ಎಂಬುದನ್ನು ಫ್ಯಾಷನ್ ತಜ್ಞರೇ ಒಪ್ಪಿಕೊಳ್ಳುತ್ತಾರೆ. ಫ್ಯಾಷನ್ ಪ್ರಿಯರು ಬಯಸುವ ಟ್ರೆಂಡಿ ಸೀರೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಸಾಂಪ್ರದಾಯಿಕ ಸೀರೆಗೆ ಆಧುನಿಕ ಸ್ಪರ್ಶ ದೊರಕಿದೆ. ಇವೆಲ್ಲವೂ ಹೊಸ ವಿನ್ಯಾಸ, ಆಕರ್ಷಕ ಚಿತ್ತಾರದೊಂದಿಗೆ ಫ್ಯಾಷನ್‌ಪ್ರಿಯರ ಮನಸೆಳೆಯುತ್ತಿದೆ. ಮನೆಯ ತಿಜೋರಿಯಲ್ಲಿ ಬಣ್ಣ ಬಣ್ಣದ, ನೂತನ ವಿನ್ಯಾಸದ ಸೀರೆಗಳು ತುಂಬುತ್ತಿವೆ.

ಶ್ರಾವಣದ ಮೊದಲ ಹಬ್ಬ ಪಂಚಮಿ. ಅದಾಗಿ ವರಮಹಾಲಕ್ಷ್ಮೀವ್ರತ. ಸಾಂಪ್ರದಾಯಿಕ ಉಡುಪಿಗೇ ಹೆಚ್ಚಿನ ಪ್ರಾಶಸ್ತ್ಯ ಈ ಹಬ್ಬಕ್ಕಿವೆಯಾದರೂ ಈಗೀಗ ಫ್ಯಾಷನಬಲ್ ಎನಿಸುವ ಕಲಾತ್ಮಕ ಸೀರೆಗಳು, ಕಲಂಕಾರಿ ಸೀರೆಗಳಷ್ಟೇ ಅಲ್ಲದೆ, ಮಿರಿಮಿರಿ ಮಿಂಚುವ ಲೆಹೆಂಗಾಗಳು, ಜರ್ದೋಸಿ, ಸಿಲ್ಕ್, ಚಿಮ್ಕಾರಿ ಹಾಫ್ ಸೀರೆಗಳು ಮಹಿಳೆಯರ ಮನಸೆಳೆಯುತ್ತಿವೆ.

‘ಹೊನ್ನಿನ ಹೊಳಪಿನ ಅಂಚಿರುವ ರೇಷ್ಮೆಸೀರೆ ತೊಟ್ಟರೆ ಎಂಬ್ರಾಯಿಡರಿ ಬ್ಲೌಸ್ ಸಖತ್ ಲುಕ್